**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No. 281/2023**

**PW-1 CW-1**

| | | |
|---|---|---|
| ಸಾಕ್ಷಿದಾರನ ಹೆಸರು | : | ವೆಂಕೋಬ ತಂದೆ ಶಿವರಾಯ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಗಬ್ಬೂರು |
| ಪ್ರಮಾಣೀಕರಿಸಿದ ದಿನಾಂಕ | : | 30-12-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-2, 3, 6 ಮತ್ತು 7 ರವರ ಪರಿಚಯ ಇರುತ್ತದೆ. ಚಾಸಾ-4 ನನಗೆ ಮಗನಾಗಬೇಕು. ಚಾಸಾ-5 ನನ್ನ ಹೆಂಡತಿ. ಆರೋಪಿತರು ನನಗೆ ಸಬಂಧಿಕರಾಗಬೇಕು ಮತ್ತು ಅವರ ಪರಿಚಯ ಇರುತ್ತದೆ. ಈಗ 04 ವರ್ಷಗಳ ಹಿಂದೆ ಬೆಳಿಗ್ಗೆ 7-00 ಗಂಟೆಗೆ ಗಬ್ಬೂರಿನ ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ಇಬ್ಬರು ಮಕ್ಕಳು ಮತ್ತು ಸೊಸೆ ಇದ್ದಾಗ ಆರೋಪಿತರು ನಮ್ಮ ಮನೆಗೆ ಬಂದು ಹೊಡೆದಿರುತ್ತಾರೆ. ಆರೋಪಿತರ ಜಮೀನಿಗೆ ನಮ್ಮ ಎಮ್ಮೆ ಹೋಗಿದ್ದು ಆ ಕುರಿತು ಪಂಚಾಯತಿ ಆಗಿದ್ದರೂ ಬೆಳಿಗ್ಗೆ 7-00 ಗಂಟೆಗೆ ಆರೋಪಿತರೆಲ್ಲರೂ ಕೂಡಿಕೊಂಡು ನಮ್ಮ ಮನೆಗೆ ಬಂದು ನಮ್ಮ ಜಮೀನಿಗೆ ಹೇಗೆ ಎಮ್ಮೆಯನ್ನು ಬಿಟ್ಟಿರುತ್ತಿ ಎಂದು ಜಗಳ ಮಾಡಿ 1 ನೇ ಆರೋಪಿ ಪ್ರಭು ನನ್ನ ಬಲ ತೋಳಿಗೆ ಕಟ್ಟಿಗೆಯಿಂದ ಹೊಡೆದಿರುತ್ತಾನೆ ಹಾಗೂ ಎಡಕಿನ ಕಿವಿಗೆ ಬಡಿಗೆಯಿಂದ ಹೊಡೆದು ಗಾಯಪಡಿಸಿರುತ್ತಾನೆ. ಚಾಸಾ-5 ನನ್ನ ಹೆಂಡತಿ ಶಾಂತಮ್ಮಳಿಗೆ ದೇವಮ್ಮ, ಯಂಕಮ್ಮ ಮತ್ತು ಅಮರಮ್ಮ ಇವರು ಕಟ್ಟಿಗೆಯಿಂದ ಬೆನ್ನಿಗೆ ಹೊಡೆದು ನೋವನ್ನುಂಟು ಮಾಡಿರುತ್ತಾರೆ, ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ಗ್ರಾಮದ ಹಿರಿಯರಿಗೆ ವಿಷಯ ತಿಳಿಸಿ ಎರಡು ದಿನಗಳ ನಂತರ ಗಬ್ಬೂರು ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನಾನು ಹೆಬ್ಬೆರಳಿನ ಗುರುತನ್ನು ಹಾಕುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನನಗೆ ಬಲಗೈ ಮೂಳೆ ಹೊರಳಿರುತ್ತದೆ. ಸದರಿ ಘಟನೆಯ ಸಂದರ್ಭದಲ್ಲಿ ಕೋವಿಡ್ ಲಾಕಡೌನ್ ಇದ್ದುದ್ದರಿಂದ ನಾಟಿ ಔಷಧ ಪಡೆದಿರುತ್ತೇನೆ ಆಸ್ಪತ್ರೆಗೆ ತೋರಿಸಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಬಡಿಗೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು MO-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಪಿ ವಕೀಲರಿಂದ.**

ನನ್ನ ಸ್ವಂತ ಊರು ಶಾವಂತಗಲ್ ಗ್ರಾಮ ಆಗಿರುತ್ತದೆ. 2 ರಿಂದ 4 ನೇ ಆರೋಪಿತರ ಸಹೋದರಿಯನ್ನು ನಾನು ವಿವಾಹ ಆಗಿರುತ್ತೇನೆ ಎಂದರೆ ಸರಿ. ಶಾವಂತಗಲ್ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳು ಇರುತ್ತವೆ. ನಾವು 04 ಜನ ಸಹೋದರರು ಇರುತ್ತೇವೆ. ಸದರಿ ನನ್ನ ಸಹೋದರರೊಂದಿಗೆ ಸರಿಯಾಗಿ ಭಾಗ ಆಗಿರುವುದಿಲ್ಲ ಎಂದು ಅವರೊಂದಿಗೆ ಜಗಳ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆರೋಪಿತರು ನನಗೆ ಅವರ ತಂಗಿಯನ್ನು ವಿವಾಹ ಮಾಡಿಕೊಟ್ಟ ನಂತರ ನನ್ನನ್ನು ಗಬ್ಬೂರು ಗ್ರಾಮಕ್ಕೆ ಕರೆದುಕೊಂಡು ಬಂದು 6 ಎಕರೆ ಜಮೀನನ್ನು ನನ್ನ ಹೆಸರಿಗೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಸದರಿ ಜಮೀನನ್ನು ನನ್ನ ತಂದೆ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರಿಗೆ ಸೇರಿದ 03 ಎಕರೆ ಜಮೀನನ್ನು ನಾನು ಲೀಜ್‌ಗೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಘಟನೆಯಾದ ನಂತರ ಆರೋಪಿತರಿಗೆ ಲೀಜ್‌ನ ಹಣ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿತರಿಗೆ ಸೇರಿದ ಆಸ್ತಿ ಆಗದೇ ಇರುವುದರಿಂದ ಹಣ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ನುಡಿಯುತ್ತಾರೆ. ಮಲ್ಲಯ್ಯ ನನಗೆ ತಮ್ಮನಾಗಬೇಕು. ಮಲ್ಲಯ್ಯನಿಗೆ ಸೇರಿದ ಜಮೀನನ್ನು ಆರೋಪಿತರು 8-9 ವರ್ಷಗಳ ಹಿಂದೆ ಖರೀದಿಸಿರುತ್ತಾರೆ ಎಂದರೆ ಸರಿ. ಮಲ್ಲಯ್ಯನ ಜಮೀನು ನನ್ನ ಜಮೀನಿಗೆ ಮತ್ತು ಆರೋಪಿತರ ಜಮೀನಿಗೆ ಹೊಂದಿಕೊಂಡು ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿ ಮಲ್ಲಯ್ಯನ ಜಮೀನು ಆರೋಪಿತರ ನಂತರ ನಾನು ಕ್ರಯಕ್ಕೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮಲ್ಲಯ್ಯನ ಜಮೀನನ್ನು ನೀಡುವಂತೆ ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ಆರೋಪಿತರೊಂದಿಗೆ ಕಿರಿಕಿರಿ ಮಾಡಿರುತ್ತೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಆರೋಪಿತರಿಗೆ ಹಣ ನೀಡಿದ್ದರಿಂದ ಜಮೀನು ನೀಡುವಂತೆ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ-6 ಮತ್ತು 7 ರವರು ನನಗೆ ಸಂಬಂಧಿಕರಾಗಬೇಕು ಎಂದರೆ ಸರಿಯಲ್ಲ. ಚಾಸಾ-6 ಮತ್ತು 7 ರವರ ಮನೆಗಳು ನಮ್ಮ ಮನೆಯ ಹತ್ತಿರ ಇರುವುದಿಲ್ಲ. ನಮ್ಮ ಮನೆಯ ಬಸ್ಸಪ್ಪ ಬುದ್ದಿನ್ನಿ ಹಾಗೂ ಕಟ್ಟಪ್ಪಾ ಕರ್ಲಿ ಇವರ ಮನೆ ಇದೆ ಎಂದರೆ ಸರಿ. ಶಿವಯ್ಯತಾತನ ಮನೆ ನಮ್ಮ ಮನೆಯ ಹತ್ತಿರ ಇದೆ ಎಂದರೆ ಸರಿಯಲ್ಲ.

ಸದರಿ ಘಟನೆಯ ಸಂದರ್ಭದಲ್ಲಿ ಸಾರ್ವಜನಿಕರು 20 ರಿಂದ 30 ಜನರು ಸೇರಿರಬಹುದು. ಬಸ್ಸಪ್ಪ ಬುದ್ದಿನ್ನಿ, ಕಟ್ಟಪ್ಪಾ ಕರ್ಲಿ ಘಟನೆಯ ಸಂದರ್ಭದಲ್ಲಿ ಹಾಜರಿದ್ದರೇ ಎಂಬ ಪ್ರಶ್ನೆಗೆ ಸಾಕ್ಷಿಯು ಗಲಾಟೆಯಲ್ಲಿ ಅವರಿದ್ದಿರುವುದನ್ನು ನಾನು ನೋಡಿರುವುದಿಲ್ಲ. ಆರೋಪಿತರೆಲ್ಲರೂ ನಮ್ಮ ಮನೆಯ ಹತ್ತಿರ ಇರುವ ಕಟ್ಟಿಗೆಗಳನ್ನು ತೆಗೆದುಕೊಂಡು ಹೊಡೆದಿರುತ್ತಾರೆ. ಮನೆಯ ಹೊರಗೆ ಖಾನಾಪುರಗೆ ಹೋಗುವ ದಾರಿಯಲ್ಲಿ ಜಗಳ ಆಗಿರುತ್ತದೆ. ನನ್ನ ಮಗ ಚಾಸಾ-4 ಗಂಗಣ್ಣನಿಗೆ ರಕ್ತಗಾಯಗಳಾಗಿದ್ದವು ನನಗೆ ರಕ್ತಗಾಯಗಳಾಗಿರುವುದಿಲ್ಲ. ಚಾಸಾ-4 ರವರ ಬಟ್ಟೆಗೆ ರಕ್ತ ಹತ್ತಿತ್ತು. 09 ಜನ ಆರೋಪಿತರೆಲ್ಲರೂ ಕಲ್ಲು ಕಟ್ಟಿಗೆಗಳಿಂದ ಹೊಡೆದಿರುತ್ತಾರೆ. ಗ್ರಾಮದ ಮಠದಲ್ಲಿ ಪಂಚಾಯತಿಗಾಗಿ ಹೋಗಿದ್ದು ಅವರು ನಮ್ಮನ್ನು

ಸೇರಿಸಿಕೊಂಡಿರುವುದಿಲ್ಲ ಮತ್ತು ನ್ಯಾಯ ಬಗೆಹರಿಸಿರುವುದಿಲ್ಲ. ಜಮೀನನ್ನು ಪಡೆದುಕೊಳ್ಳುವುದಕ್ಕೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ 04 ವರ್ಷಗಳ ಹಿಂದೆ ಬೆಳಿಗ್ಗೆ 7-00 ಗಂಟೆಗೆ ಆರೋಪಿತರೆಲ್ಲರೂ ಕೂಡಿಕೊಂಡು ಬಂದು ನಮಗೆ ಕಟ್ಟಿಗೆಯಿಂದ ಹೊಡೆದು ಗಾಯಗೊಳಿಸಿ ಪ್ರಾಣ ಬೆದರಿಕೆ ಹಾಕಿರುತ್ತಾರೆಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಪ್ರಭು ಕಟ್ಟಿಗೆಯಿಂದ ಬಲ ತೋಳಿಗೆ ಹೊಡೆದು ತೀವ್ರ ಸ್ವರೂಪದ ಗಾಯಪಡಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಬೂದೆಪ್ಪ ನನ್ನ ಕಿವಿಗೆ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 7 ರಿಂದ 9 ನೇ ಆರೋಪಿತರು ನನ್ನ ಹೆಂಡತಿಗೆ ಕಟ್ಟಿಗೆಯಿಂದ ಹೊಡೆದು ನೋವನ್ನುಂಟು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಜಮೀನಿನಲ್ಲಿ ನನ್ನ ಎಮ್ಮೆ ಹೋಗಿದ್ದರಿಂದ ಆರೋಪಿತರು ನಮ್ಮೊಂದಿಗೆ ಜಗಳ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.